ಆದ್ದರಿಂದ ಅವನ್ನು ಹೆಚ್ಚಿಗೆ ವಿವರಿಸುವುದು ಬೇಡವೆನಿಸುತ್ತಿದೆ. ಸದ್ಯಕ್ಕೆ ಒಂದೆರಡು ನೆನಪುಗಳನ್ನು ಮಾತ್ರ ಹೇಳುವೆ.

ಕುರ್ಚಿಯ ಮೇಲೆ ಹೆಣ್ಣುಮಕ್ಕಳು ಕುಳಿತುಕೊಳ್ಳುವ ರಿವಾಜು ನಾನು ಚಿಕ್ಕವಳಿದ್ದಾಗ ಇರಲಿಲ್ಲ. ಹಾಗೆಲ್ಲ ಕುಳಿತುಕೊಳ್ಳುವವರೂ ಕುಳಿತುಕೊಂಡು ಹಿಂದೇ ಮುಂದೇ ನಿಮಿಟುವವರೂ ಗಂಡಸರು. ನಾವು ನೆಲದ ಮೇಲೆ ಕುಳಿತು ಬರೆಯುವವರು ಓದುವವರು. 'ಮೇಜು ಕುರ್ಚಿಯ ಮೂಲಕ' ಎಂಬ ಒಂದು ಬರಹದಲ್ಲಿ ಈ ಕೆಲ ಅನುಭವಗಳನ್ನು ಹೇಳಿಕೊಂಡಿದ್ದೇನೆ. ನಾನು ಪ್ರಾಥಮಿಕದಲ್ಲಿದ್ದಾಗ ನಮ್ಮ ಅತ್ಯಂತ ಪರಿಚಯದ ಮಹಿಳೆಯೊಬ್ಬರು ಟೀಚರಾಗಿ ಬಂದರು. ಆಗ ಸದಾ ಅವರಿವರ ಕುರಿತು ಮಾತಾಡಿ ವಿಮರ್ಶಿಸಿ ಟೀಕೆ ಟಿಪ್ಪಣಿ ಮಾಡಿ ನಕ್ಕು ಲೇವಡಿ ಮಾಡಿ ಕರುಣೆ ತೋರಿ ಒಟ್ಟು ರಸವತ್ತಾಗಿ ದಿನಗಳೆಯುವ, ನಮ್ಮ ಮನೆಗೆ ಸದಾ ಬಂದು ಹೋಗುವ, ಒಬ್ಬ ಹೆಂಗಸು ನನ್ನನ್ನು ಕರೆದು, 'ಹೆಹೆ, ಅವಳು ನಿಮ್ಮ ಟೀಚರಾ! ದೊಡ್ಡ ಟೀಚರ್ತಿ ಹಾಗಾದರೆ! ಕುರ್ಚಿಯ ಮೇಲೆ ಕುಳಿತು ಕುಂಡೆ ಎತ್ತಿ ಹೂಸು ಬಿಡುತ್ತಾಳಂತಲ್ಲ!' ಎಂದು ನಕ್ಕೂ ನಕ್ಕೂ ಇಟ್ಟದ್ದು, ನಾನು ಕಕ್ಕಾಬಿಕ್ಕಿಯಾಗಿ ನಿಂತುಕೊಂಡು ಏನೆಂದೇ ಅರ್ಥವಾಗದೆ ಅವಳು ನಕ್ಕಷ್ಟೂ ಅಳು ತುಂಬಿಕೊಂಡದ್ದು ನೆನಪಾಗುತ್ತಿದೆ.

## ಖಿನ್ನತೆಯೇ ಮೂರ್ತಿವೆತ್ತ ಆ ಮೂರ್ತಿ

ಆಕೆ ಯಾರೆಂದು ಯಾಕೆ ಗುರುತು ಹೇಳಬೇಕು? ಮಾನಸಿಕ ಕಷ್ಟದಲ್ಲಿರುವ ಸೂಕ್ಷ್ಮಜೀವಿ ಎಂದುಕೊಳ್ಳಿ. ಬೆಳಗಾತ ಎಂಟು ಗಂಟೆಯ ಹೊತ್ತು, ರಸ್ತೆಯ ಮೇಲೆ ಆಕೆ ಹೋಗುತ್ತಿದ್ದಾರೆ. ತಲೆಮಿಂದು, ಒದ್ದೆತಲೆಯನ್ನು ಹಾಗೆಯೇ ಹರಡಿಕೊಂಡು, ಮಂಕುನೀಲಿ ಮಗ್ಗದ ಸೀರೆಯುಟ್ಟು ಕೈಯಲ್ಲಿ ಕಾಯಿಬುಟ್ಟಿ ಬೀಸಿಕೊಂಡು. ವಯಸ್ಸು ಐವತ್ತು ದಾಟಿದೆ. ಅವರು ರಸ್ತೆಯ ಮೇಲೆ ಕಾಣಿಸಿಕೊಂಡರೆಂದರೆ ಅದು ಬೆಳಗಿನ ಎಂಟು ಗಂಟೆಯೆಂದೇ. ಮತ್ತೆ ಗಡಿಯಾರ ನೋಡುವುದೇ ಬೇಡ. ಏನೋ ಗುಂಗಿನಲ್ಲೆಂಬಂತೆ ಕತ್ತು ವಾರೆ ಮಾಡಿಕೊಂಡು ಹೆಜ್ಜೆಯ ಮೇಲೆ ಹೆಜ್ಜೆ ಇಟ್ಟಂತೆ ನಿಧಾನಗತಿಯಲ್ಲಿ ಹೋಗುತ್ತ ಹೋಗುತ್ತ ಗೂಡಂಗಡಿ ಬರುತ್ತಲೂ ನಿಲ್ಲುತ್ತಾರೆ. ಬಳಿ ಹೋಗಿ ಬಾಳೆಹಣ್ಣು ಕೊಳ್ಳಲೆಂಬಂತೆ ಆರಿಸುವ ಹಾಗೆ ಕೈಯಾಡಿಸುತ್ತಾರೆ. ಕೊಳ್ಳದೆ ನಡಿಗೆ ಮುಂದರಿಸುತ್ತಾರೆ. ಪ್ರತಿದಿನದ ಸಂಗತಿ ಇದು. ಯಾರೂ ಹಿಲುಗಾರಿಕೆ ಮಾಡುವುದಿಲ್ಲ, ವಿಶೇಷವಾಗಿ ಗಮನಿಸುವುದೂ ಇಲ್ಲ. ಅಂಗಡಿಯವರಿಗೆ ಕೂಡ ಆಕೆಯನ್ನು ಕಂಡರೆ ಖೇದ ಭರಿತ ಗೌರವ. ಆಕೆ ಯಾಕೆ ಹೀಗಾದರು? ಬೇಡ. ಹೇಳುವುದು ಸುಲಭವಲ್ಲ, ಹೇಳಿದರೆ ಯಾರೂ ನಂಬುವ ಹಾಗೂ ಇಲ್ಲ. ಅಂತಹ ಕತೆಯದು. ಆಕೆ ದಿನಾ ಹೀಗೆ ಹೋಗುವುದಾದರೂ ಎಲ್ಲಿಗೆ? ಕುಂದೇಶ್ವರ ದೇವಸ್ಥಾನಕ್ಕೆ. ಅಲ್ಲಿ ಹೋಗಿ ದೇವರಿಗೆ ಮೂರುಸುತ್ತು ಬಂದು, ಪೂಜೆ ಮಂಜರಿಂದ ದೇವರಿಗೆ ಕಾಯಿ ಒಡೆಸಿ, ಪೌಳಿಯಲ್ಲಿ ಮನ ಬಂದಷ್ಟು ಹೊತ್ತು ಕುಳಿತುಕೊಂಡು ಎದ್ದು ಮತ್ತೆ ಸೀದಾ ಮನೆಗೆ ಮರಳುತ್ತಾರೆ. ಮತ್ತೆ ಅವರನ್ನು ನೋಡುವುದು ಮರುದಿನ ಕರಾರುವಾಕ್ ಎಂಟುಗಂಟೆಗೇ. ವಿಶೇಷಗಟ್ಟಲೆ ದಿನಗಳಂದು ನಾವೆಲ್ಲಾದರೂ ಬೇಗನೆ ದೇವಸ್ಥಾನಕ್ಕೆ ಹೋದರೆ ನಮಗೆ ಸಿಗುವರು. ಮಾತಿಲ್ಲ ಕತೆಯಿಲ್ಲ. ಸುಮ್ಮನೆ ನೋಡುವರು. ಒಮ್ಮೊಮ್ಮೆ ಎಲ್ಲೋ ಗುರುತು ಹತ್ತಿದಂತೆ ಮುಗುಳು ನಗುವರು. ವರ್ಷಗಳ ಕಾಲ ನಮ್ಮೂರಿನ ನಿತ್ಯದೃಶ್ಯವಾಗಿದ್ದ ಇದು ಆಡುಮಾತಿನಲ್ಲಿ ಸೇರಿಹೋಗಿಬಿಟ್ಟಿತ್ತು. ನಾವೆಲ್ಲಾದರೂ ತಲೆಮಿಂದು, ಒದ್ದೆತಲೆ ಹರಡಿಕೊಂಡು ಜೋಭದ್ರವಾಗಿ ಮಂಕಾಗಿ ಕುಳಿತಿದ್ದರೆ 'ಏನು, ಆ ಆಕೆಯ ಹಾಗೆ? ಏಳು, ಮೈ ಮಂಡೆ ಸರಿ ಮಾಡಿಕೋ. ಹೂಂ!'